

ನೆಲದ ಮೇಲೆ ಬಿದ್ದು ಹೊರಳಾಡಿ ನಗುವ ಇಮೋಜಿ ಒತ್ತಿಬಿಟ್ಟಿದ್ದಾರೆ. ಇದನ್ನು ನೋಡಿದ ಅಡ್ಮಿನ್‌ಗಳು ಆ ಸಂದೇಶವನ್ನು ಡಿಲೀಟ್ ಮಾಡಿ 'ಸಾವನ್ನು ಸಂಭ್ರಮಿಸುವ ಸದಸ್ಯರು ನಮ್ಮ ಗ್ರೂಪ್‌ನಲ್ಲಿರುವುದು ಬೇಡ' ಎಂದು ಅವರನ್ನು ಗ್ರೂಪ್‌ನಿಂದ ಹೊರ ಹಾಕಿದರು. ಅಲ್ಲಾ, ಆ ಇಮೋಜಿ ನೋಡಿ ಅಡ್ಮಿನ್‌ಗಳಿಗೆ ಇಷ್ಟು ಕೋಪ ಬಂದಿದ್ದರೆ, ಅದೇ ಗ್ರೂಪಿನ ಸದಸ್ಯನಾಗಿದ್ದ ಅಗಲಿದ ಆತ್ಮಕ್ಕೆ ಇನ್ನೆಷ್ಟು ಕೋಪ ಬಂದಿರಲಿಕ್ಕಿಲ್ಲ ಹೇಳಿ.

ನನ್ನ ಗೆಳತಿ ತನ್ನ ಮಗಳ ಸಾಧನೆಗಳನ್ನು ತನ್ನ ಇನ್ನೊಬ್ಬ ಗೆಳತಿಯ ಮುಂದೆ ಹಂಚಿಕೊಂಡಾಗ ಅವಳು ಅದಕ್ಕೆ ಪ್ರತ್ಯುತ್ತರವಾಗಿ ಸಂತೋಷದ ಇಮೋಜಿ ಕಳಿಸುವ ಬದಲು ತಪ್ಪಾಗಿ ಬೇಸರದ ಇಮೋಜಿ ಕಳಿಸಿದ್ದಾಳೆ. ಇದನ್ನು ನೋಡಿದ ನನ್ನ ಗೆಳತಿಗೆ ಕೋಪ ಬಂದು ಇಂತಹ ಹೊಟ್ಟೆಕಿಚ್ಚು ಪಡುವ ಸ್ನೇಹಿತರೇ ಬೇಡ ಎಂದು ಎಷ್ಟೋ ವರ್ಷಗಳ ಸ್ನೇಹವನ್ನು ಕ್ಷಣದಲ್ಲೇ ಕಟ್ ಮಾಡಿಬಿಟ್ಟಳು. ಈ ಇಮೋಜಿಯ ಬಾಯಿಯ ಕಮಾನು ಉಲ್ಟಾ ಇಲ್ಲದಿದ್ದಕ್ಕೆ ಅವರಿಬ್ಬರ ಸ್ನೇಹದ ಗಾಲಿ ಪಲ್ಟಿ ಹೊಡೆದಿತ್ತು.

ಫೇಸ್ಬುಕ್‌ನಲ್ಲಂತೂ ಲೈಕ್ ಇಮೋಜಿ ಒತ್ತುವ ಜನಕ್ಕೆ ಕೊರತೆ ಇಲ್ಲ. ಲೈಕ್ ಒತ್ತಲು ಪೋಸ್ಟ್ ಓದಲೇಬೇಕೆನ್ನುವ ಯಾವ ಕಡ್ಡಾಯವೂ ಇಲ್ಲ. ನಮ್ಮದೂ ಒಂದಿರಲಿ ಎನ್ನುವ ಮನಸ್ಥಿತಿಯಿಂದಲೋ ಅಥವಾ ಆಗ ಫೇಸ್ಬುಕ್ ಪೋಸ್ಟ್‌ಗೆ ಲೈಕ್ ಇಮೋಜಿ ಮಾತ್ರ ಇದ್ದಿದ್ದರಿಂದಲೋ ಅದು ಸಾವಿನ ಸುದ್ದಿ ಇದ್ದರೂ ಲೈಕ್ ಇಮೋಜಿ ಒತ್ತುವ ಜನ ತುಂಬಾ ಇದ್ದರು. ಸಾವಿನ ಪೋಸ್ಟ್‌ಗೆ ಕೂಡ ಜನ ಲೈಕ್ ಕೊಟ್ಟಿದ್ದನ್ನು ನೋಡಿ ಸತ್ತವರ ಆತ್ಮ ಜುಕರ್ ಬರ್ಗ್ ಮೇಲೆ ಕೇಸ್ ಹಾಕಿದ್ರಿಂದ ಡೆವಲಪರ್ ಟೀಮ್‌ನವರು ಫೇಸ್ಬುಕ್ ಪೋಸ್ಟ್‌ಗೆ ದುಃಖದ ಇಮೋಜಿಯನ್ನೂ ಸೇರಿಸಿದರು. ಇದರಿಂದ ಫೇಸ್ಬುಕ್ ಬಳಕೆದಾರರೂ ಖುಷ್, ಆತ್ಮವೂ ಖುಷ್.





ಒಂದು ಸಲ ನಮ್ಮ ಪಕ್ಕದ ಮನೆ ಅಜ್ಜಿ ಪಾಯಸ ಸವಿಯಲು ಮೊಮ್ಮಗನನ್ನು ಮನೆಗೆ ಆಹ್ವಾನಿಸಲು ಸಂದೇಶ ಕಳಿಸಿದರಂತೆ. ಅವರ ಸಂದೇಶ ಈ ರೀತಿ ಇತ್ತು. 'ಇವತ್ತು ಪಾಯಸ ಮಾಡಿದ್ದೇನೆ. ನಿನಗೂ ಬೇಕಾ? ಹೂಂ ಎಂದಾದರೆ ಪಾಯಸ ಸವಿಯಲು ಬೇಗ ಬಾ. ನಿನಗಾಗಿ ಕಾಯುತ್ತಿರುವೆ'. ಅದಕ್ಕೆ ಮೊಮ್ಮಗನ ಉತ್ತರ ಏನಿರಬಹುದು ಹೇಳಿ? ಅವನ ಉತ್ತರ ಸುತ್ತಿಗೆಯ ಇಮೋಜಿಯಾಗಿತ್ತು. ಅದನ್ನು ನೋಡಿದ ಅಜ್ಜಿಗೆ ತಲೆಯ ಮೇಲೆ ಸುತ್ತಿಗೆ ಹೊಡೆದಷ್ಟೇ ಕೋಪ ಬಂದಿತ್ತು. ಅಲ್ವಾ ಮತ್ತೆ, ಮೊಮ್ಮಗನ ಮೇಲಿನ ಪ್ರೀತಿಯಿಂದ ಪಾಯಸ ಸವಿಯಲು ಕರೆದರೆ ಆ ಮೊಮ್ಮಗ ಇಷ್ಟು ಉದ್ಧಟತನದಿಂದ ಸುತ್ತಿಗೆ ತೋರಿಸಿದ್ರೆ ಹೇಗಾಗ್ಲಿಕ್ಕಿಲ್ಲ. ಮೊಮ್ಮಗನ ಜವಾಬು ನೋಡಿ ನೀವೂ ಹೀಗೆ ಬೆಚ್ಚಿಬಿದ್ದಿದ್ರೆ ಸ್ವಲ್ಪ ತಡೀರಿ. ಪಾಪ ಆ ಹುಡುಗ ಒಳ್ಳೆಯವನೇ, ಅವನು ಕಳಿಸಿದ ಉತ್ತರವೂ ಸರೀನೇ. ಅರೇ, ಈ ಸುತ್ತಿಗೆಗೂ ಪಾಯಸಕ್ಕೂ ಏನು ಸಂಬಂಧ ಅಂತೀರಾ? ಹಿಂದಿಯಲ್ಲಿ ಸುತ್ತಿಗೆಗೆ ಹಥೋಡಾ ಅಂತಾರಲ್ಲ. ಅಂದ್ರೆ ಪಾಯಸ ಬೇಕಾ





ಎಂದು ಅಜ್ಜಿ ಕೇಳಿದ್ದಕ್ಕೆ 'ಹಾ ಥೋಡಾ' ಎಂದು ಹೇಳಲು ಹಥೋಡಾ ಇಮೋಜಿ ಬಳಸಿದ್ದನಂತೆ. ಅಬ್ಬಾ! ಎಷ್ಟು ಸೋಮಾರಿ–ಬುದ್ಧಿವಂತರು ಈಗಿನ ಮಕ್ಕಳು.

ಕೆಲವು ತಿಂಗಳುಗಳ ಹಿಂದೆ ನನ್ನ ಗೆಳತಿ ಹೊಸದಾಗಿ ಹಾಸ್ಟೆಲ್ ಸೇರಿದ ತನ್ನ ಮಗನಿಗೆ 'ಹಾಸ್ಟೆಲ್ ಹೇಗಿದೆ' ಅಂತ ಮೆಸೇಜ್ ಕಳಿಸಿದರೆ, ಅವನು '**at** ಹಾಸ್ಟೆಲ್' ಅಂತ ಉತ್ತರ ಕಳಿಸಿದ. ಆ ಇಮೋಜಿಯ ಅರ್ಥ ತಿಳಿಯದ ಅವಳು ಗೂಗಲ್‌ನಲ್ಲಿ ಹುಡುಕಿದಾಗ ಅದು ಬಾಂಬ್ ಎಂದು ತಿಳಿದು ಅವಳಿಗೆ ಕಾಲ ಕೆಳಗಿನ ನೆಲವೇ ಕುಸಿದ ಹಾಗಾಗಿ 'ಮಗನ ಹಾಸ್ಟೆಲ್ನಲ್ಲಿ ಬಾಂಬ್ ಇಟ್ಟಿದ್ದಾರಂತೆ, ಇರುವ ಒಬ್ಬ ಮಗ ಕಣ್ಮುಂದೆ ಇರಲಿ, ದೂರದ ಊರಿಗೆ ಕಳಿಸುವುದು ಬೇಡ ಎಂದು ಬಡ್ಕೊಂಡೆ, ಈಗ ಅವನ ಜೀವಕ್ಕೆ ಕುತ್ತು ಬಂದಿದೆ' ಎಂದು ಗಂಡನಿಗೆ ಸಿಕ್ಕಾಪಟ್ಟೆ ಬೈಯುತ್ತಾ ಗೋಳೋ ಅಂತ ಅಳಲು ಶುರು ಮಾಡಿದ್ಲಂತೆ. ಕೂಡಲೇ ಟೀವಿ ಚಾಲು ಮಾಡಿ ಇದ್ದ ಬಿದ್ದ ಎಲ್ಲ ನ್ಯೂಸ್ ಚಾನಲ್‌ಗಳನ್ನು ನೋಡಿದ್ರೂ ಹಾಸ್ಟೆಲ್‌ನಲ್ಲಿ ಬಾಂಬ್ ಪತ್ತೆ ಆದ ಬಗ್ಗೆ ಎಲ್ಲೂ ಸುದ್ದಿಯಿಲ್ಲ. ಇನ್ನೇನು ಪೊಲೀಸರಿಗೆ ತಿಳಿಸಬೇಕು ಎನ್ನುವಷ್ಟರಲ್ಲಿ ಮಗನದ್ದೇ ಕಾಲ್ ಬಂತು. ಢವಢವಿಸುವ ಎದೆಬಡಿತ ಇನ್ನೂ ಜೋರಾಗಿ ಆತಂಕದಿಂದ ಫೋನ್ ರಿಸೀವ್ ಮಾಡಿದಾಗ, ಆ ಕಡೆಯಿಂದ ಮಗನ ಧ್ವನಿಯನ್ನಾಲಿಸಿದಾಗ ಸದ್ಯ ಅವನು ಜೀವಂತವಾಗಿದ್ದಾನೆ ಎಂದರಿತು ಬಾಂಬ್ ಬಗ್ಗೆ ಕೇಳಿದಾಗ ಮಗ ಹೇಳಿದ್ದು– 'ನನ್ನ ಸಂದೇಶವನ್ನು ಸರಿಯಾಗಿ ಡಿಕೋಡ್ ಮಾಡಿ ನೋಡಿ. ನಾನು ಹೇಳಿದ್ದು '**at Hostel** ಅಂದರೆ **Bombat Hostel** (ಬೊಂಬಾಟ್ ಹಾಸ್ಟೆಲ್) ಎಂದರ್ಥ' ಎಂದು ಹೇಳಿದಾಗ ಅವನಿಟ್ಟ ಇಮೋಜಿ ಬಾಂಬ್‌ಗೆ ಅವನ ಮೇಲೆ ಅಮ್ಮ ಅಪ್ಪನ ಕೋಪ ಬಾಂಬ್‌ನಷ್ಟೇ ಜೋರಾಗಿ ಸಿಡಿದಿತ್ತು.

ಒಟ್ಟಿನಲ್ಲಿ ಇದು ಸಾಮಾಜಿಕ ಜಾಲತಾಣದ ದುನಿಯಾ. ಎದುರು ಬದರು ಕುಳಿತು ಮಾತುಕತೆ ಹೋಗಿ ಮೊಬೈಲ್‌ನಲ್ಲಿ ಮಾತುಕತೆ ಬಂತು ಡುಂ ಡುಮುಕ್ಕ, ಮೊಬೈಲ್‌ನಲ್ಲಿ ಮಾತುಕತೆ ಹೋಗಿ ಸಂದೇಶ ಕಳಿಸಲು ಎಸ್‌ಎಂಎಸ್ ಬಂತು ಡುಂ ಡುಮುಕ್ಕ, ಎಸ್‌ಎಂಎಸ್ ಹೋಗಿ ವಾಟ್ಸ್‌ಆಪ್ ಟೆಕ್ಸ್ಟಿಂಗ್ ಬಂತು ಡುಂ ಡುಮುಕ್ಕ, ವಾಟ್ಸ್‌ಆಪ್ ಟೆಕ್ಸ್ಟಿಂಗ್ ಹೋಗಿ ವಾಟ್ಸ್‌ಆಪ್ ಚಿತ್ರ ಸಂದೇಶ (ಇಮೋಜಿ) ಬಂತು ಡುಂ ಡುಮುಕ್ಕ. ಕಾಲಾಯ ತಸ್ಮೈ ನಮಃ.

ಪ್ರತಿಕ್ರಿಯಿಸಿ: **feedback@sudha.co.in**